O.S. ನಂಬರಃ 30/2019

ಪಿ. ಡಬ್ಲ್ಯೂಃ 1

ದಿಃ 07-02-2024 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಮುಂದುವರೆದ ಪಾಟಿ ಸವಾಲುಃ 1,3,4 ಮತ್ತು 6 ನೇ ಪ್ರತಿವಾದಿಯರ ಪರ ಶ್ರೀ ಎಸ್.ಓ.ಎನ್. ವಕೀಲರಿಂದಃ

ತದನಂತರ ಹಾಜರುಪಡಿಸಿದವು ಬಟ್ಟೆ ಖರೀದಿ ಮಾಡಿದ ಕುರಿತು, ಮನೆಗೆ ಉಪಯೋಗಿಸಿದ ಟೈಲ್ಸ ಖರೀದಿ ಕುರಿತು ದಾಖಲಾತಿಗಳಾಗಿರುತ್ತವೆ. ಬಟ್ಟೆ ಖರೀದಿ ಬಿಲ್ ಕ್ರೆಡಿಟ್ ಬಿಲ್ ಇರುತ್ತದೆ ಎಂದರೆ ಸಾಕ್ಷಿ ಕ್ಯಾಶ್ ಹಾಗೂ ಕ್ರೆಡಿಟ್ ಎರಡೂ ಇರುತ್ತವೆ. ಹಣ ನೀಡಿ ಬಟ್ಟೆ ಖರೀದಿಸಿದರೆ ಕ್ಯಾಶ ಬಿಲ್ ನೀಡುತ್ತಾರೆ, ಇಲ್ಲದಿದ್ದರೆ ಕ್ರೆಡಿಟ್ ಬಿಲ್ ನೀಡುತ್ತಾರೆ ಎಂದರೆ ಸರಿ. ಯಾರು ಖರೀದಿಗೆ ಹೋಗುತ್ತಾರೋ ಅವರ ಹೆಸರಿನಲ್ಲಿ ಬಿಲ್ ಆಗುತ್ತದೆ ಎಂದರೆ ಸರಿ. ಹಾಜರುಪಡಿಸಿದ ಬಿಲ್ ಎಲ್ಲ ಸೇರಿಸಿದರೂ ಸಹ ರೂ.2 ಲಕ್ಷ ರಷ್ಟು ಆಗುವುದಿಲ್ಲ ಎಂದರೆ ಸಾಕ್ಷಿ, ಇನ್ನೂ ಇತ್ತು ಅದೆಲ್ಲಾ ಕಳೆದು ಹೋಗಿದೆ ಎಂದು ಹೇಳುತ್ತಾರೆ.

ಬಟ್ಟೆ ವ್ಯಾಪಾರದಲ್ಲಿ ಕನಿಷ್ಠ 10% ಲಾಭ ಇಟ್ಟುಕೊಂಡು ವ್ಯಾಪಾರ ಮಾಡಲಾಗುತ್ತದೆ. ಮನೆ ಕಟ್ಟಿಸಿದ ಬಗ್ಗೆ ತೋರಿಸಲು ಟೈಲ್ಸ ಬಿಲ್ ಹಾಜರುಪಡಿಸಿದ್ದೇನೆ. ಮನೆ ಕಟ್ಟಿಸಿದ್ದರ ಕುರಿತು ಹಾಜರುಪಡಿಸಿದ ಬಿಲ್ ಹೊರತುಪಡಿಸಿ ಬೇರೆ ಬಿಲ್ ನನ್ನ ಬಳಿ ಇಲ್ಲ ಎಂದರೆ ಸರಿ, ಸಾಕ್ಷಿ ಸಾಕಷ್ಟು ಬಿಲ್ ಗಳು ಕಳೆದುಹೋಗಿವೆ ಎಂದು ಹೇಳುತ್ತಾರೆ.

ಪ್ರತಿವಾದಿಯರೂ ಸಹ ಮನೆ ಕಟ್ಟಿಸಲು ಹಣ ನೀಡಿದ್ದು, ಕೆಲವೊಂದು ಬಿಲ್ ಮಾತ್ರ ನನ್ನ ಹೆಸರಿನಲ್ಲಿದೆ ಎಂದರೆ ಸರಿಯಲ್ಲ. ನಾನು ಸರಂಜಾಮ ಖರೀದಿಸಲು ಹೋದ ಸಮಯದಲ್ಲಿ ನನ್ನ ಹೆಸರಿನಲ್ಲಿ ಬಿಲ್ ಆಗಿದೆ. ಸಾಕ್ಷಿ ನನ್ನ ಅಂಗಡಿ ಹಾಗೂ ಮನೆಗೆ ಸಂಬಂಧಿಸಿದ ಸಾಮಾನು ಖರೀದಿಸಿದ್ದರಿಂದ ನನ್ನ ಹೆಸರಿನಲ್ಲಿ ಬಿಲ್ ಆಗಿದೆ ಎಂದು ಹೇಳುತ್ತಾರೆ. ಸಾಮಾನು ಖರೀದಿಸಲು ಪ್ರತಿವಾದಿಯರೂ ಸಹ ಹಣ ಹೂಡಿರುತ್ತಾರೆಂದರೆ ಸರಿಯಲ್ಲ.

ತಂದೆ-ತಾಯಿ ಕುಟುಂಬ ನಿರ್ವಹಣೆ ಹಾಗೂ ವ್ಯಾಪಾರ ನಿರ್ವಹಣೆ ಮಾಡುತ್ತಿದ್ದರು ಎಂದರೆ ಸಾಕ್ಷಿ, 3 ನೇ ಪ್ರತಿವಾದಿ ಮಾಡುತ್ತಿದ್ದ ಎಂದು ಹೇಳುತ್ತಾರೆ. ನಾನು ಕಟ್ಟಿಸಿದ ಮನೆ ಎಂದು ಹೇಳುವ ಕಟ್ಟಡಕ್ಕೆ ಅಂದಾಜು 5 ಲಕ್ಷದವರೆಗೆ ನಾನು ಹಣ ಹೂಡಿದ್ದೇನೆ. ಸದರಿ ಮನೆಗೆ ಅಂದಾಜು 15 ಲಕ್ಷ ಖರ್ಚಾಗಿದೆ ಎಂದು ಪ್ರತಿವಾದಿಯರು ಹೇಳುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿ ಹಂಚಿನ ಮನೆಯಿದ್ದು, ಅಷ್ಟೊಂದು ಖರ್ಚಾಗುವುದಿಲ್ಲ ಎಂದು ಹೇಳುತ್ತಾರೆ. 2004 ರಲ್ಲಿ ನಾನು ಕಟ್ಟಿಸಿದ ಮನೆ ನಿರ್ಮಾಣ ಪೂರ್ಣಗೊಂಡಿದೆ. ಸದರಿ ಮನೆ ಖರ್ಚುವೆಚ್ಚದ ಲೆಕ್ಕ ಇಟ್ಟುಕೊಂಡು, ವರದಿ ಒಪ್ಪಿಸಬೇಕೆಂದು ನಮ್ಮ ಮಧ್ಯ ಮಾತುಕತೆ ಆಗಿತ್ತು ಎಂದರೆ ಸರಿಯಲ್ಲ. ಆದರೆ ನಾನು ಮನೆ ನಿರ್ಮಾಣಕ್ಕೆ ಇರುವ ಹಣವನ್ನು ಸ್ವಂತಕ್ಕೆ ಬಳಸಿಕೊಂಡು ಲೆಕ್ಕಪತ್ರ ನೀಡಿಲ್ಲ ಎಂದರೆ ಸರಿಯಲ್ಲ. ನಿಪಿ-31 ರಿಂದ 39 ಬಾಡಿಗೆ ಕರಾರು ಪತ್ರಗಳು ನನ್ನ ಬಳಿ ಹೇಗೆ ಬಂದವು ಎಂದರೆ ಬಾಡಿಗೆದಾರರ ಕಡೆಯಿಂದ ನಾನು ಕೇಳಿ ಪಡೆದಿದ್ದೇನೆ ಎಂದು ಹೇಳುತ್ತಾರೆ. ನಿಪಿ-31 ರಿಂದ 39 ರ ಬಾಡಿಗೆ ನಾನು ಪಡೆಯುತ್ತಿರುವುದರಿಂದ ಅವು ನನ್ನ ಬಳಿ ಇದೆ

ಎಂದರೆ ಸರಿಯಲ್ಲ, ಸಾಕ್ಷಿ ನಾನು ಬಾಡಿಗೆದಾರರ ಬಳಿ ಬಾಡಿಗೆ ಕರಾರಿನ ಪ್ರತಿ ಪಡೆಯಲು ಹೋದಾಗ ಅವರು ಬಾಡಿಗೆ ಕರಾರನ್ನು ಸಂಬಂಧಪಟ್ಟ ಕಚೇರಿಗೆ ತೋರಿಸಲು ಎರಡು ಪ್ರತಿಗಳಲ್ಲಿ ಒಂದು ಮೂಲ ಪ್ರತಿಯನ್ನು ನಮ್ಮಲ್ಲಿ ಇಟ್ಟುಕೊಳ್ಳುತ್ತಿದ್ದೇವು ಎಂದು ಹೇಳಿ ಮೂಲಪ್ರತಿಯನ್ನು ನೀಡಿರುತ್ತಾರೆಂದು ಹೇಳುತ್ತಾರೆ. ಬಾಡಿಗೆ ಕರಾರು ಪತ್ರವನ್ನು ನನ್ನ ಬಳಿ ಇಟ್ಟುಕೊಂಡು ಅದರ ಜೆರಾಕ್ಸ ಪ್ರತಿಯನ್ನು ಬಾಡಿಗೆದಾರರಿಗೆ ನೀಡುತ್ತಿದ್ದೆ ಎಂದರೆ ಸರಿಯಲ್ಲ. ಬಾಡಿಗೆ ಕರಾರಿನ ಹಣದ ಖರ್ಚುವೆಚ್ಚ ನೋಡಿಕೊಳ್ಳಲು ನನ್ನ ಬಳಿ ಪ್ರತಿವಾದಿಯರು ನೀಡುವಂತೆ ಹೇಳಿರುತ್ತಾರೆಂದರೆ ಸರಿಯಲ್ಲ.

ನಿಪಿ-42 ರಲ್ಲಿಯ ಕಿರಾಣಿ ಅಂಗಡಿಯನ್ನು ನಾನೇ ಕಟ್ಟಿಸಿ ನಾನೇ ನಿರ್ವಹಿಸಿಕೊಂಡು ಹೋಗುತ್ತಿದ್ದು, 2017 ರಿಂದ ಅದನ್ನು ಬಾಡಿಗೆ ನೀಡಿರುತ್ತೇನೆ. ಕಿರಾಣಿ ಅಂಗಡಿ ಸರಿಯಾಗಿ ನಿರ್ವಹಣೆ ಮಾಡಿಕೊಂಡು ಹೋಗಲು ಪ್ರತಿವಾದಿಯರು ನನ್ನ ಹೆಸರಿನಲ್ಲಿಯೇ ಮಾಡಿದ್ದರು ಎಂದರೆ ಸರಿಯಲ್ಲ. ನನ್ನ ಸಾಲದ ಹಣಕ್ಕೆ 3 ನೇ ಪ್ರತಿವಾದಿ ಜಾಮೀನುದಾರನಿರುತ್ತಾನೆ ಎಂದರೆ ಸರಿ. ಸದರಿ ಆಸ್ತಿ ಸಹ ಕುಟುಂಬದ ಆಸ್ತಿ ಇರುವುದರಿಂದ 3 ನೇ ಪ್ರತಿವಾದಿ ಜಾಮೀನುದಾರನಾಗಿರುತ್ತಾನೆ ಎಂದರೆ ಸರಿಯಲ್ಲ. ನನ್ನ ಅಂಗಡಿ ಎಂದು ಹೇಳುವ ಆಸ್ತಿಗೆ ಕುಟುಂಬದ ವತಿಯಿಂದ ಬಾಡಿಗೆ ನೀಡಿದ ಅಂಗಡಿಗಳಿಂದ ಬರುವ ಬಾಡಿಗೆ ಹಣ ವಿನಿಯೋಗವಾಗಿದೆ ಎಂದರೆ ಸರಿಯಲ್ಲ. ನಿಪಿ-53 ಮತ್ತು 54, 59,60 ರಶೀದಿಗಳಲ್ಲಿ ತೋರಿಸಿದ ಕಟ್ಟಡ ಸಾಮಗ್ರಿಗಳನ್ನು ದಾವಾ ಆಸ್ತಿಗಳಿಗೂ ಉಪಯೋಗಿಸಿಲ್ಲ ಎಂದರೆ ಸರಿಯಲ್ಲ. ಸದರಿ ರಶೀದಿಗಳು ನನ್ನ ಹೆಂಡತಿಯ

ತಂದೆಯ ಆಸ್ತಿಗೆ ಸಂಬಂಧಿಸಿದ್ದು ಇದ್ದು, ರಶೀದಿಗಳು ನನ್ನ ಹೆಸರಿನಲ್ಲಿವೆ ಎಂದರೆ ಸರಿಯಲ್ಲ.

ಸಿಂಡಿಕೇಟ್ ಬ್ಯಾಂಕನಲ್ಲಿ ಕಟ್ಟಡಕ್ಕಾಗಿ ಪಡೆದ ಸಾಲ ಹೊರತುಪಡಿಸಿ, ಉಳಿದ ಕಡೆ ಪಡೆದ ಸಾಲ ಬೇರೆ ಬೇರೆ ಕಡೆ ಪ್ರತಿವಾದಿಯರ ಗಮನಕ್ಕೆ ಇರದಂತೆ ಹೂಡಿದ್ದೇನೆ ಎಂದರೆ ಕಟ್ಟಡ ನಿರ್ಮಾಣ ಸಲುವಾಗಿ ಪಡೆದ ಸಾಲ ತೀರಿಸಲು ಅಲ್ಲಲ್ಲಿ ವ್ಯವಸ್ಥೆ ಮಾಡಿಕೊಂಡು ನಂತರ ಮರುಪಾವತಿಸುತ್ತಾ ಬಂದಿದ್ದೇನೆ ಎಂದು ಹೇಳುತ್ತಾರೆ. ಇದುವರೆಗೂ ಪಾಲು ವಾಟ್ನಿ ಆಗಿಲ್ಲವಾದ್ದರಿಂದ ಎಲ್ಲ ಆಸ್ತಿಗಳು ಪಾಲುವಾಟ್ನಿಗೆ ಹಾಕಬೇಕಾಗುತ್ತದೆ ಎಂದರೆ ನನ್ನ ಸ್ವಯಾರ್ಜಿತ ಆಸ್ತಿ ಹೊರತುಪಡಿಸಬೇಕಾಗುತ್ತದೆ ಎಂದು ಹೇಳುತ್ತಾರೆ.

ಮರು ವಿಚಾರಣೆಃ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

ಸಿವಿಲ್ ನ್ಯಾಯಾಧೀಶರು, ಅಂಕೋಲಾ.